PCR 4/2023
PW.1

ದಿನಾಂಕ: 30-05-2024 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಸ್ವಪ್ರಮಾಣೀಕೃತ ಹೇಳಿಕೆ

3. ದಿಃ 19.04.2022 ರಂದು ಬಿ.ಇ.ಓ ಆಫಿಸಗೆ ನನ್ನ ಪೇ ಸ್ಲಿಪ್‌ನ್ನು ಕೇಳಲು ಹೋಗಿದ್ದು, ಆಗ ಸದರಿ ಆಫೀಸನಲ್ಲಿದ್ದಂತಹ ಮ್ಯಾನೇಜರ ಪ್ರಕಾಶ ಶಿವಮೂರ್ತಿ ಹೊಸಮನಿ ಇವರು ನನಗೆ ಅರ್ಜಿಯನ್ನು ಕೊಡಿ ಆಮೇಲೆ ನಿಮ್ಮ ನ ಪೇ ಸ್ಲಿಪ್‌ನ್ನು ಕೊಡುತ್ತೇನೆ ಅಂತಾ ಹೇಳಿದರು. ನಾನು ಅರ್ಜಿಯನ್ನು ನೀಡಿದ್ದು ಆಗ ನ ಪೇ ಸ್ಲಿಪ್‌ನ್ನು ತಯಾರು ಮಾಡಿದ್ದು ಆದರೆ ಅದರ ಮೇಲೆ ಮ್ಯಾನೇಜರವರು ತಮ್ಮ ಸಹಿಯನ್ನು ಹಾಕಲಿಲ್ಲ, ಆಗ ಅವರು ನನ್ನದು ಬ್ಯಾಂಕಿನಲ್ಲಿ ಕೆಲಸ ಇದೆ ಬ್ಯಾಂಕಿಗೆ ಹೋಗಿ ವಾಪಸ್ ಬಂದು ಸಹಿ ಹಾಕುತ್ತೇನೆ ಅಂತಾ ಹೇಳಿ ಹೋದರು. ಮತ್ತೆ ನಾನು ಸದರಿಯವರಿಗೆ ಕೇಳಿಕೊಂಡಿದ್ದೇನೆಂದರೆ ನನಗೆ ಅನಾರೋಗ್ಯ ಇದ್ದು ವೈದ್ಯರು ನಿಮಗೆ ಆ್ಯಂಜೊಗ್ರಾಫಿ ಮಾಡಬೇಕಾಗಿದ್ದು ಎಂದು ತಿಳಿಸಿದ್ದು ಆದ ಕಾರಣ ನನಗೆ ಕೆ.ಎಲ್.ಇ ಆಸ್ಪತ್ರೆಯಲ್ಲಿ ನ ಪೇ ಸ್ಲಿಪ್‌ನ್ನು ಹಾಜರುಪಡಿಸಲು ಅವಶ್ಯಕತೆ ಇರುತ್ತದೆ ಅಂತಾ ಹೇಳಿದ್ದರೂ ಸಹ ಅವರು ನನ್ನ ಮಾತು ಕೇಳದೇ ಹಾಗೆ ಹೋದರು.

4. ಸದರಿ ಮ್ಯಾನೇಜರ ಪ್ರಕಾಶ ಶಿವಮೂರ್ತಿ ಹೊಸಮನಿ ಇವರು ಕಚೇರಿಯಿಂದ ಹೊರಗಡೆ ಬಂದು ವಾಹನ ನಿಲುಗಡೆ ಸ್ಥಳದಲ್ಲಿ ನಿಂತುಕೊಂಡಿದ್ದು, ಅಲ್ಲಿಗೆ ನಾನು ಮತ್ತು ನನ್ನ ಮಗ ರಮೇಶ ಪ್ರಕಾಶ ಅಕ್ಕೋಳಕರ ಇಬ್ಬರೂ ಸೇರಿ ಹೋಗಿ ಸದರಿಯವರನ್ನು ಈ ದಿನ ನನ್ನದು ಶಸ್ತ್ರ ಚಿಕಿತ್ಸೆ ಮಾಡಬೇಕಾಗಿದ್ದು, ಆದ ಕಾರಣ ಪೇ ಸ್ಲಿಪ್ ಅತಿ ಅವಶ್ಯಕ ಇದೆ ನೀಡಿ ಎಂದು ಕೇಳಿದಾಗ ನನ್ನ ಮಗನಿಗೆ ಸದರಿ ವ್ಯಕ್ತಿ ನೀನು ಯಾರು ನನ್ನನ್ನು ಕೇಳಲು ಅಂತಾ ಹೇಳಿ ನನ್ನ ಮಗನ ಎಡಗಡೆ ಕಪಾಳಕ್ಕೆ ಕೈಯಿಂದ ಹೊಡೆದು ನನ್ನ ಮಗನಿಗೆ ನುಗಿಸಿಕೊಟ್ಟು ನಂತರ ನನ್ನನ್ನು ಸಹ ಅವರ ಕೈಯಿಂದ ನುಗಿಸಿಕೊಟ್ಟರು. ಆಗ ನನಗೆ ವಡ್ಡರ ಬೋಸಡಿ ಮಗನೇ ಅಂತಾ ಬೈದರು. ಸದರಿಯವರು ನುಗಿಸಿಕೊಟ್ಟದ್ದರಿಂದ ಆಗ ನಾನು ಕೆಳಗೆ ಬಿದ್ದಿದ್ದು ಆಗ ನನಗೆ ರಕ್ತದೊತ್ತಡ ಜಾಸ್ತಿ ಯಾಗಿ ಉಸಿರಾಡಲು ತೊಂದರೆ ಆಗಿದ್ದರಿಂದ ಚಿಕಿತ್ಸೆಗಾಗಿ ಸಾಯಿ ಆಸ್ಪತ್ರೆಗೆ ಹೋಗಿ ದಾಖಲಾಗಿ ಅಲ್ಲಿ ನನಗೆ ಕೃತಕ ಆಮ್ಲಜನಕವನ್ನು ನೀಡಿದರು.

5. ನಾನು ಸಾಯಿ ಆಸ್ಪತ್ರೆ ಐ.ಸಿ.ಯು ನಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾಗ ಪ್ರಕಾಶ ಶಿವಮೂರ್ತಿ ಹೊಸಮನಿ ಇವರು ಖಾನಾಪೂರ ಪೋಲಿಸ ಠಾಣೆಗೆ ಹೋಗಿ ನನ್ನ ಮತ್ತು ನನ್ನ ಮಗನ ವಿರುದ್ಧ ದೂರು ದಾಖಲಿಸರುತ್ತಾರೆ. ಸದರಿ ಪ್ರಕರಣವು ಖಾನಾಪೂರ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇದ್ದು, ನಾನು ಮತ್ತು ನನ್ನ ಮಗ ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗುತ್ತಿದ್ದೇವೆ. ನನ್ನನ್ನು ತದನಂತರ 5 ತಿಂಗಳು ಕೆಲಸದಿಂದ ಅಮಾನತ್ತುಗೊಳಿಸಿದ್ದು, ಅದರಿಂದ ನನಗೆ ಮಾನಸಿಕ ತೊಂದರೆ ಹಾಗೂ ಆರ್ಥಿಕ ನಷ್ಟವಾಯಿತು. 6 ತಿಂಗಳ ನಂತರ ನನ್ನ ಅಮಾನತ್ತನ್ನು ರದ್ದುಗೊಳಿಸಿ ಮತ್ತೆ ಕೆಲಸಕ್ಕೆ ತೆಗೆದುಕೊಂಡರು. ನನ್ನದು ಹಿಂದೂ ವಡ್ಡರ ಜಾತಿಯಾಗಿದ್ದು, ಅದು ಪರಿಶಿಷ್ಟ ಜಾತಿಯಲ್ಲಿ ಬರುತ್ತದೆ. ನನ್ನದು ಪರಿಶಿಷ್ಟ ಜಾತಿ ಎಂದು ತೋರಿಸಲು ಈ ನ್ಯಾಯಾಲಯಕ್ಕೆ ನನ್ನ ಜಾತಿ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ.

ಈ ಹಂತದಲ್ಲಿ ಮುಂದುವರೆದ ಸ್ವಪ್ರಮಾಣೀಕೃತ ಹೇಳಿಕೆಯನ್ನು ಮಾಡಿಸಲು ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.